ಹಾರಂಗಿ ಜಲಾಶಯದಲ್ಲಿರುವ ಶೀತಲ ಗ್ರಾಮಗಳ ಅಭಿವೃದ್ಧಿ ಬಗ್ಗೆ

569:(4072)

ಶ್ರೀ ಎಂ.ಪಿ.ಅಪ್ಪಚ್ಚುರಂಜನ್ (ಸೋಮವಾರಪೇಟೆ): ಮಾನ್ಯ ಬೃಹತ್ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಕೊಡಗಿನ ಹಾರಂಗಿ ಜಲಾಶಯದಲ್ಲಿ ಇರುವ ಯಾವ ಗ್ರಾಮಗಳನ್ನು ಶೀತಲ ಗ್ರಾಮಗಳಾಗಿ ಗುರುತಿಸಲಾಗಿದೆ?

2. ಶೀತಲ ಗ್ರಾಮಗಳ ಅಭಿವೃದ್ಧಿಗೆ ಸರ್ಕಾರದವರು ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು?

ಕೆ.ಎನ್.ನಾಗೇಗೌಡ (ಬೃಹತ್ ನೀರಾವಾರಿ ಮಂತ್ರಿಗಳು):

1. ಹಾರಂಗಿ ಜಲಾಶಯದ ವ್ಯಾಪ್ತಿಯಲ್ಲಿ ಬರುವ ಈ ಕೆಳಗಿನ 16 ಗ್ರಾಮಗಳನ್ನು ಶೀತಪೀಡಿತ ಪ್ರದೇಶಗಳೆಂದು ಗುರುತಿಸಲಾಗಿದೆ 1) ಬಂಡಳ್ಳಿ ಹರಿಜನ ಕಾಲೋನಿ 2) ಸಾಲೆಕೊಪ್ಪಲು 3) ಬಸವನಹಳ್ಳಿ 4) ಚಾಮರಾಯನ ಕೋಟೆ 5) ಕಣಿವೆ 6) ಭುವನಗಿರಿ ಹರಿಜನ ಕಾಲೋನಿ 7) ಬಸವಾಪಟ್ಟಣ ಹರಿಜನ ಕಾಲೋನಿ 8) ಹನ್ಯಾಳು 9) ಮತ್ತೀಗೋಡು 10) ಗೊಬ್ಬಿ 11) ಹೊಸಹಳ್ಳಿ ಜೆ 12) ನಿಲುವಾಗಿಲು 13) ಕೆರಗಲಕೊಪ್ಪಲು 14) ರುದ್ರಪಟ್ಟಣ 15) ಅಬ್ಬೂರು 16) ಸಾಲೆಕೊಪ್ಪಲು (ಸೋಮವಾರಪೇಟೆ ತಾಲ್ಲೂಕು)

2. 16 ಶೀತ ಪೀಡಿತ ಗ್ರಾಮಗಳಿಗೆ ಸ್ಥಳಾಂತರದ ಅಥವಾ ಪರಿಹಾರ ನೀಡುವ ಬಗ್ಗೆ ಅಂದಾಜುಪಟ್ಟಿ ತಯಾರಿಸಲಾಗಿದೆ ಹಾಗೂ 10 ಗ್ರಾಮಗಳಲ್ಲಿ ಕೆಲಸವು ಪ್ರಗತಿಯಲ್ಲಿ ಇರುತ್ತದೆ. 5 ಗ್ರಾಮಗಳ ಅಂದರೆ ಜೆ.ಹೊಸಹಳ್ಳಿ, ನಿಲುವಾಗಿಲು, ಸಾಲೆಕೊಪ್ಪಲು, ಕಣಿವೆ ಕೆರಗಲಕೊಪ್ಪಲು ಮತ್ತು ಅಬ್ಬೂರು ಗ್ರಾಮದ ಅಂದಾಜು ಪಟ್ಟಿ ಅನುಮೋದನೆ ಹಂತದಲ್ಲಿರುತ್ತದೆ.

ರಾಜ್ಯದಲ್ಲಿನ ಲಾಕಪ್ ಸಾವುಗಳು

570:(3992)

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಿನಾಂಕ 1-4-97 ರಿಂದ 30-9-98ರವರೆಗೆ ರಾಜ್ಯದಲ್ಲಿ ಎಷ್ಟು ಲಾಕಪ್ ಸಾವುಗಳು ಸಂಭವಿಸಿದೆ, ವ್ಯಕ್ತಿಗಳ ಹೆಸರು, ಲಾಕಪ್ ಸ್ಥಳ ಹಾಗೂ ಸಾವು ಸಂಭವಿಸಲು ಕಾರಣಗಳೇನು.

ಆ) ಇದುವರೆವಿಗೂ ಈ ವಿಷಯಕ್ಕೆ ಸಂಬಂಧ ಪಟ್ಟಂತೆ ಎಷ್ಟು ಪೋಲೀಸ್ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆ.

ಇ) ಈ ವಿಷಯ ಮರುಕಳಿಸಿದಂತೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಆರ್.ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು):

ಅ) ದಿನಾಂಕ 1-4-97 ರಿಂದ 30-9-98ರವರೆಗೆ ರಾಜ್ಯದಲ್ಲಿ ಒಟ್ಟು 9 ಲಾಕಪ್ ಸಾವುಗಳು ಸಂಭವಿಸಿದೆ (ವಿವರಗಳನ್ನು ಅನುಬಂಧ 'ಎ'ನಲ್ಲಿ ಒದಗಿಸಲಾಗಿದೆ)

ಆ) ದಿನಾಂಕ 1-4-97 ರಿಂದ 30-9-98ರವರೆಗೆ ದಾಖಲಾದ ಒಟ್ಟು 8 ಪ್ರಕರಣಗಳಲ್ಲಿ ಒಟ್ಟು 20 ಪೊಲೀಸ್ ಅಧಿಕಾರಿಗಳು: ಸಿಬ್ಬಂದಿಗಳ ಮೇಲೆ ಶಿಸ್ತಿನ ಕ್ರಮವನ್ನು ಕೈಗೊಳ್ಳಲಾಗಿದೆ.

ಇ) ಸತತವಾಗಿ ಘಟಕಾಧಿಕಾರಿಗಳಿಗೆ ನೀಡಲಾದ ಮಾರ್ಗ ದರ್ಶನವನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚನೆಗಳನ್ನು ನೀಡಲಾಗಿದೆ. ಸಾಮಾನ್ಯವಾಗಿ ನಿಯಮದಂತೆ ಯಾವುದೇ ವ್ಯಕ್ತಿಯನ್ನು ಬಂಧಿಸದೇ ಅಥವಾ ನ್ಯಾಯಯುತ ಕಾರಣಕ್ಕಾಗಿಯಲ್ಲದೆ ಪೊಲೀಸ್ ಠಾಣೆಯಲ್ಲಿ ಇಟ್ಟುಕೊಳ್ಳಬಾರದು ವ್ಯಕ್ತಿಗಳು ಪೊಲೀಸ್ ವಶದಲ್ಲಿರುವಾಗ ಮತ್ತು ಬಂಧನದಲ್ಲಿ ಮುಂದುವರೆಯುವಾಗ ಕಸ್ಟಡಿ ಅಧಿಕಾರಿಯಾದ ಸಹಾಯಕ ಪೋಲೀಸ್ ಇನ್ಸ್‌ಪೆಕ್ಟರ್ ಅಥವಾ ಹಿರಿಯ ಮುಖ್ಯ ಪೇದೆ ಅವರು ಬಂಧನದಲ್ಲಿರುವ ವ್ಯಕ್ತಿಯನ್ನು ಸಂಬಂಧಪಟ್ಟ ನ್ಯಾಯಾಲಯದಲ್ಲಿ ಹಾಜರುಪಡಿಸುವವರೆಗೆ ಅಥವಾ ಜಾಮೀನಿನ ಮೇಲೆ ಬಿಡುಗಡೆ ಹೊಂದುವವರೆಗೆ ಬಂಧನದಲ್ಲಿರುವ ವ್ಯಕ್ತಿಯ ಸುರಕ್ಷತೆಯನ್ನು ಕಾಪಾಡುವ ಜವಾಬ್ದಾರಿಯನ್ನು ವಹಿಸುತ್ತಾರೆ. ಸಂಬಂಧಪಟ್ಟ ಠಾಣಾಧಿಕಾರಿಗಳ ಬಂಧನದಲ್ಲಿರುವ ವ್ಯಕ್ತಿಯ ಬಗ್ಗೆ ಸಂಬಂಧಪಟ್ಟ ನಿಯಂತ್ರಣ ಕೊಠಡಿಗೆ ವರದಿಯನ್ನು ಪ್ರತಿ ರಾತ್ರಿ 10-00 ಗಂಟೆಗೆ ತಪ್ಪದೇ ನೀಡಬೇಕು. ಮೇಲ್ವಿಚಾರಣಾ ಅಧಿಕಾರಿಗಳು ಪೊಲೀಸ್ ಠಾಣೆಗಳಿಗೆ ಸೂಚನೆ ಇಲ್ಲದೆ ಮತ್ತು ಸೂಚನೆ ನೀಡಿ ಭೇಟಿ ನೀಡಿದಾಗ ಯಾವುದೇ ವ್ಯಕ್ತಿಯನ್ನು ಅಕ್ರಮವಾಗಿ ಪೊಲೀಸ್ ಠಾಣೆಯಲ್ಲಿ ಇಡಲಾಗಿದೆಯೇ ಎಂಬ ಬಗ್ಗೆ ಪರಿಶೀಲಿಸಿ, ಹಾಗಿದ್ದಲ್ಲಿ ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮವನ್ನು ಜರುಗಿಸಲು ಸೂಚನೆ ನೀಡಲಾಗಿದೆ. ಸಾಕ್ಷಿದಾರರನ್ನು ಅರ್ಜಿದಾರರ ಮತ್ತು ಪಿರ್ಯಾದುದಾರರನ್ನು ಪೋಲೀಸ್ ಠಾಣೆಗೆ ಕರೆಸದೆ ಅವರಿಗೆ ಮುಂಚಿತವಾಗಿ ಸೂಚನೆಯನ್ನು ನೀಡಿ ಅವರ

ವಾಸಸ್ಥಳದಲ್ಲಿ ಕೆಲಸ ಮಾಡುವ ಸ್ಥಳದಲ್ಲಿಯೇ ಪರಿಶೀಲಿಸಬೇಕೆಂದು ಅಧಿಕಾರಿಗಳಿಗೆ ಸೂಚನೆಯನ್ನು ನೀಡಲಾಗಿದೆ.

ಮೇಲ್ಕಂಡ ಸೂಚನೆಗಳಲ್ಲದೇ ಬಂಧಿಸಲು ಹೋಗುವಾಗ ಮತ್ತು ಬಂಧಿಯನ್ನು ತನಿಖೆಗೆ ಒಳಪಡಿಸುವ ಪೋಲೀಸ್ ಸಿಬ್ಬಂದಿಯು ಹುದ್ದೆ ಮತ್ತು ಹೆಸರನ್ನುಳ್ಳ ನಾಮಫಲಕವನ್ನು ಕಡ್ಡಾಯವಾಗಿ ಧರಿಸಬೇಕೆಂದು ಸೂಚಿಸಲಾಗಿದೆ. ಬಂಧಿಸುವಾಗ ಬಂಧನದ ಕಾರಣವನ್ನು ಮತ್ತು ಆತನ ಬಂಧನದ ಬಗ್ಗೆ ಬಂಧುಗಳಿಗೆ ಅಥವಾ ಸ್ನೇಹಿತರುಗಳಿಗೆ ವಿಳಂಭ ಮಾಡದೇ ತಿಳಿಸಬೇಕೆಂದು ಸೂಚಿಸಲಾಗಿದೆ. ಹಾಗೂ ಬಂಧನದ ಬಗ್ಗೆ ಜ್ಞಾಪನಪತ್ರವನ್ನು ಸಿದ್ಧಪಡಿಸಿ, ಜ್ಞಾಪನ ಪತ್ರದಲ್ಲಿ ಬಂಧಿಸಲಾದ ವೇಳೆ ಮತ್ತು ತನಿಖೆಗೆ ಒಳಪಡಿಸಿದ ವಿವರಗಳನ್ನು ನಮೂದಿಸಿ ಅದನ್ನು ಒಬ್ಬ ಸ್ವತಂತ್ರ ಸಾಕ್ಷಿಯಿಂದ ಧೃಡಪಡಿಸಬೇಕು. ಗಾಯಗೊಂಡ ವ್ಯಕ್ತಿಗಳನ್ನು ಬಂಧಿಸುವ ಬದಲು ಆಸ್ಪತ್ರೆಗೆ ದಾಖಲು ಮಾಡಿ ಈ ಬಗ್ಗೆ ಸಂಬಂಧಪಟ್ಟ ನ್ಯಾಯಾಲಯಕ್ಕೆ ಮಾಹಿತಿಯನ್ನು ನೀಡಬೇಕು. ಇಂತಹ ಪ್ರಕರಣಗಳಲ್ಲಿ ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ ನಂತರ ಆರೋಪಿಯನ್ನು ಬಂಧಿಸಬೇಕು.

ಪೋಲೀಸ್ ಠಾಣೆಗಳಲ್ಲಿ ಮೂರನೇ ದರ್ಜೆ ರೀತಿಯ ಕೀಳು ಮಟ್ಟ ರೀತಿಗಳನ್ನು ತಡೆಗಟ್ಟುವ ಬಗ್ಗೆ 1971 ಪೋರ್ ಕಮಿಟಿ ವರದಿಯ ಶಿಫಾರಸ್ಸಿನ ಪ್ರಕಾರ ಪೊಲೀಸ್ ಸಿಬ್ಬಂದಿಗಳಿಗೆ ಸೂಕ್ತ ತರಬೇತಿಯನ್ನು ನೀಡಲಾಗುತ್ತಿದೆ. ನವ ಮತ್ತು ವೈಜ್ಞಾನಿಕ ಪದ್ಧತಿ ಪ್ರಕಾರ ಅಪರಾಧ ತನಿಖೆಯನ್ನು ಕೈಗೊಳ್ಳುವಂತೆ ಸೂಚನೆ ನೀಡಲಾಗಿದೆ.

2) ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಲಾದ ಎಲ್ಲಾ ಮಾರ್ಗ ಸೂಚಿಗಳನ್ನು ಈಗಾಗಲೇ ಎಲ್ಲಾ ಘಟಕಾಧಿಕಾರಿಗಳಿಗೆ ತಿಳಿಸಲಾಗಿದೆ.

ಅನುಬಂಧ

	ವ್ಯಕ್ತಿಗಳ ಹೆಸರು	ಲಾಕಪ್ ಸ್ಥಳ	ಸಾವು ಸಂಭವಿಸಲು ಕಾರಣ
1)	ವೆಂಕಟ ಅಲಿಯಾಸ್ ವೆಂಕಟೇಶ್	ಕೋಲಾರ ನಗರ ಪೊಲೀಸ್ ಠಾಣೆ	ಮೊದಲೇ ಇದ್ದ ಹೃದಯ ಮತ್ತು ಪುಪ್ಪುಸ ರೋಗಗಳು ದೇಹದ ಮೇಲಾದ ಗಾಯಗಳಿಂದ ಉಲ್ಬಣಿಸಿದ ಹೃದಯದ ಕ್ರಿಯೆ ಮತ್ತು ಉಸಿರಾಟ ನಿಂತು ಮೃತಪಟ್ಟಿರುತ್ತಾರೆ.
2)	ವಸಂತ್ ಅಲಿಯಾಸ್ ವಸಂತಕುಮಾರ್	ವಿಮಾನ ನಿಲ್ದಾಣ ಪೊಲೀಸ್ ಠಾಣೆ	ಮೊದಲೆ ಇದ್ದ ಹೃದಯ ಹಾಗೂ ಪುಪ್ಪುಸ ರೋಗಗಳು ದೇಹದ ಮೇಲಾದ ಗಾಯಗಳಿಂದಾಗಿ ಉಲ್ಬಣಿಸಿದ ಉಸಿರಾಟ ಕ್ರಿಯೆ ನಿಂತು ಹೋಗಿ ಸಾವು ಸಂಭವಿಸಿದೆ.
3)	ಶ್ರೀಮತಿ ಸುಂಕಮ್ಮ	ಬ್ರೂಸ್‌ಪೇಟೆ ಪೊಲೀಸ್ ಠಾಣೆ, ಬಳ್ಳಾರಿ ಜಿಲ್ಲೆ.	ರಕ್ತ ಧಮನಿ ಮತ್ತು ದೇಹದೊಳಗಿನ ವ್ರಣ ಒಡೆದುದರಿಂದ ರಕ್ತಸ್ರಾವವಾಗಿ ಅಪಘಾತದಿಂದ ಸಾವು ಸಂಭವಿಸಿದೆ.
4)	ಬಸವರಾಜ ಬಿನ್ ಕುಳ್ಳೇಗೌಡ	ಮಂಡ್ಯ ಪಶ್ಚಿಮ ಪೊಲೀಸ್ ಠಾಣೆ	ಶವದ ಮರಣೋತ್ತರ ಪರೀಕ್ಷೆ ಮಾಡಿದ ವೈದ್ಯರು ವಿಧಿ ವಿಜ್ಞಾನ ಪ್ರಯೋಗಾಲಯ (ಫೊರೆನ್ಸಿಕ್ ಲ್ಯಾಬರೇಟರಿ) ದಿಂದ ವರದಿ ಬಂದ ನಂತರ ಸಾವಿನ ಬಗ್ಗೆ ತಮ್ಮ ಖಚಿತ ಅಭಿಪ್ರಾಯ ತಿಳಿಸುವುದಾಗಿ ಕಾದಿರಿಸಿದ್ದಾರೆ.
5)	ರವಿ ಅಲಿಯಾಸ್ ಅಯ್ಯಪ್ಪ ಬಿನ್ ಕುರುಂಬಯ್ಯ	ಸಂಜಯನಗರ ಪೊಲೀಸ್ ಠಾಣೆ ಬೆಂಗಳೂರು.	ಮೊದಲೆ ಇದ್ದ ತೀವ್ರ ಕ್ಷಯರೋಗ ಮತ್ತು ಪುಪ್ಪುಸದಲ್ಲಿ ವ್ರಣ ಒಡೆದು ತೀವ್ರ ರಕ್ತ ಸಾವ್ರವಾಗಿದ್ದರಿಂದ ಉಸಿರುಕಟ್ಟಿ ಸಾವು ಸಂಭವಿಸಿದೆ.

6)	ಗೋರಯ್ಯ	ಇಡಪನೂರು ಪೊಲೀಸ್ ಠಾಣೆ	ಶವದ ಮರಣೋತ್ತರ ಪರೀಕ್ಷೆ ಮಾಡಿದ ವೈದ್ಯರು ವಿಧಿ ವಿಜ್ಞಾನ ಪ್ರಯೋಗಾಲಯದಿಂದ ವರದಿ ಬಂದ ನಂತರ ಸಾವಿನ ಬಗ್ಗೆ ಅಭಿಪ್ರಾಯ ನೀಡುವುದಾಗಿ ತಿಳಿಸಿರುತ್ತಾರೆ.
7)	ರಾಮಚಂದ್ರ ಅಲಿಯಾಸ್ ರಂಗ ಅಲಿಯಾಸ್ ಕೋಳಿ ರಂಗ	ಸುಳ್ಯ ಪೊಲೀಸ್ ಠಾಣೆ.	ಶವದ ಮರಣೋತ್ತರ ಪರೀಕ್ಷೆ ಮಾಡಿದ ವೈದ್ಯರು ವಿಧಿ ವಿಜ್ಞಾನ ಪ್ರಯೋಗಾಲಯದಿಂದ ವರದಿ ಬಂದ ನಂತರ ಸಾವಿನ ಬಗ್ಗೆ ಅಭಿಪ್ರಾಯ ನೀಡುವುದಾಗಿ ತಿಳಿಸಿರುತ್ತಾರೆ.
8)	ಅಲ್ವಿನ್ ಬಿನ್ ನಿರ್ಮಲ್ ಕುಮಾರ್.	ವಾಡಿ, ಪೊಲೀಸ್ ಠಾಣೆ.	ಶವದ ಮರಣೋತ್ತರ ಪರೀಕ್ಷೆ ಮಾಡಿದ ವೈದ್ಯರು ವಿಧಿ ವಿಜ್ಞಾನ ಪ್ರಯೋಗಾಲಯದಿಂದ ವರದಿ ಬಂದ ನಂತರ ಸಾವಿನ ಬಗ್ಗೆ ಅಭಿಪ್ರಾಯ ನೀಡುವುದಾಗಿ ತಿಳಿಸಿರುತ್ತಾರೆ.
9)	ರಾಜೇಂದ್ರನ್	ಮಲ್ಲಿಗೆ ನರ್ಸಿಂಗ್ ಹೋಂ ಮಲ್ಲೇಶ್ವರಂ.	ಮರಣೋತ್ತರ ಪರೀಕ್ಷಾ ವರದಿ ಬರಬೇಕಾಗಿದೆ.